# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆ: ಎಸ್.ಸಿ.136/2024

ಅಸಾ : 04
ಚಾಸಾ : 06

ಸಾಕ್ಷಿದಾರರ ಹೆಸರು : ಜಗದೀಶ ಬಾರ್ಕಿ

ತಂದೆಯ ಹೆಸರು : ಸಿದ್ದಪ್ಪ

ವಯಸ್ಸು : 28 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸ ಸ್ಥಳ : ಉದಗಟ್ಟಿ, ರಾಣೆಬೆನ್ನೂರು ತಾ.

ದಿನಾಂಕ: **29/04/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ: –**

1. ಚಾಸಾ-1 ಮತ್ತು 7 ನನಗೆ ಗೊತ್ತು. ಇಂದು ಹಾಜರಿರುವ ಆರೋಪಿತರು ಗೊತ್ತು. ಚಾಸಾ-1 ಚಾಸಾ-7ರ ಹಾಲು ಸಾಗಾಣಿಕೆ ವಾಹನವನ್ನು ಚಲಾಯಿಸುತ್ತಿದ್ದರು. ನಾನು ಸದರಿ ವಾಹನದಲ್ಲಿ ಹಾಲಿನ ಕ್ಯಾನ್ ಗಳನ್ನು ಹಾಕುವ ಮತ್ತು ಇಳಿಸುವ ಕೆಲಸ ಮಾಡುತ್ತಿದ್ದೆ. ಚೌಡಯ್ಯದಾನಾಪುರ ಮತ್ತು ಇತರ ಹಳ್ಳಿಗಳಿಗೆ ಹೋಗಿ ಕ್ಯಾನಿನಲ್ಲಿ ಹಾಲು ತುಂಬಿಕೊಂಡು ಕರ್ಜಗಿ ಹತ್ತಿರ ಇರುವ ಕೆಎಂಎಫ್ ಗೆ ಪೂರೈಸುತ್ತಿದ್ದೆವು. ಬೆಳಿಗ್ಗೆ 6.30/7.00 ಘಂಟೆಯಿಂದ ರಾತ್ರಿ 10.00 ಘಂಟೆಯವರೆಗೆ ಕೆಲಸ ಮಾಡುತ್ತಿದ್ದೆವು.

2. ದಿನಾಂಕ:08/08/2024 ರಂದು ಬೆಳಿಗ್ಗೆ 6.00 ಘಂಟೆಗೆ ಊರಿನಿಂದ ಹೊರಟು ಹಳ್ಳಿಗಳಿಗೆ ಹೋಗಿ ಹಾಲು ತುಂಬಿಕೊಂಡು ರಾತ್ರಿ 10.30 ಕ್ಕೆ ಕೆಎಂಎಫ್ ಗೆ ಪೂರೈಸಿ ವಾಪಾಸು ನಮ್ಮ ಊರಿಗೆ ಹೋಗುತ್ತಿದ್ದೆವು. ನಾವು ತೋಟದಯಲ್ಲಾಪುರದ ಸರ್ವಿಸ್ ರಸ್ತೆಯಲ್ಲಿದ್ದಾಗ 3 ಜನ ನೀಲಿ ಬಣ್ಣದ ಎಚ್.ಎಫ್. ಡಿಲಕ್ಸ ಬೈಕಿನಲ್ಲಿ ಬಂದು ಮುಂದೆ ಹೋಗಿ ವಾಪಾಸು ಬಂದು ನಮ್ಮ ವಾಹನ ನಿಲ್ಲಿಸಲು ಕೈಮಾಡಿದರು. ನಾವು ವಾಹನವನ್ನು ನಿಲ್ಲಿಸಿದೆವು.

3. ಆಗ ಅವರು ಚಾಸಾ-1 ರ ಕೊರಳುಪಟ್ಟಿಯನ್ನು ಹಿಡಿದು ಬಾ ಬ್ರದರ್ ಎಂದು ಕರೆದು ಕೆಳಗೆ ಇಳಿಸಿ ನಿಮ್ಮ ಹತ್ತಿರ ಇರುವ ವಸ್ತು ಕೊಡಿ ಎಂದು ಕೇಳಿದರು. ನಮ್ಮ ಹತ್ತಿರ ಏನೂ ಇಲ್ಲ ಎಂದು ಹೇಳಿದೆವು. ರಾಡಿನಿಂದ ಚಾಸಾ-1 ರ ತಲೆಯ ಕೆಳಹಿಂಭಾಗಕ್ಕೆ ಹೊಡೆದು, ಅವರಲ್ಲಿದ್ದ ಓಪ್ಪೋ ಮೊಬೈಲ ಪೋನ ಹಾಗೂ ರೂ.5,000/- ತೆಗೆದುಕೊಂಡರು. ನನಗೆ ಕೈಯಿಂದ ಎಡರಟ್ಟೆಗೆ

ಹೊಡೆದು, ನನ್ನಲ್ಲಿದ್ದ ಒಂದು ಟೆಕ್ನೋ ಫೋನ ಹಾಗೂ ರೂ.2,600/- ಕಸಿದುಕೊಂಡರು. ನಮ್ಮನ್ನು ಹೋಗ್ರಲೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಹೋದರು.

4. ನಮಗೆ ಗಾಬರಿಯಾಯಿತು. ನಾವು ಚಾಸಾ-7 ರಿಗೆ ಫೋನ ಮೂಲಕ ಸಂಪರ್ಕಿಸಿದೆವು. ಅವರು ಬಂದ ನಂತರ ಊರಿಗೆ ಹೋದೆವು. ನಮ್ಮ ಸಂಬಂಧಿಕರು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಬಂದರು. ಪೊಲೀಸರು ನನ್ನನ್ನು ಹಾವೇರಿ ಶಹರ ಪೊಲೀಸ ಠಾಣೆಗೆ ಕರೆಯಿಸಿ ಈ ದಿನ ಹಾಜರಿರುವ 1 ರಿಂದ 3 ನೇ ಆರೋಪಿತರನ್ನುತೋರಿಸಿದರು. ಆರೋಪಿತರೇ ನಮ್ಮನ್ನು ತಡೆದು, ಹಿಡಿದು ಹೊಡೆದು, ಮೊಬೈಲ್ ಮತ್ತು ಹಣ ಕಸಿದುಕೊಂಡ ವ್ಯಕ್ತಿಗಳಿರುತ್ತಾರೆ. ಇಂದು ಹಾಜರಿರುವ 1 ನೇ ಆರೋಪಿ ಆ ದಿನ ಕೆಂಪು ಬಣ್ಣದ ಬಟ್ಟೆ ಧರಿಸಿದ್ದ.

5. ನನ್ನ ಮತ್ತು ಚಾಸಾ-1 ರ ಮೊಬೈಲ್ ಮತ್ತು ಆರೋಪಿತರು ಘಟನೆಗೆ ಉಪಯೋಗಿಸಿದ ಬೈಕು, ರಾಡು ಮತ್ತು ಚಾಕು ಗುರುತಿಸಬಲ್ಲೆ. (ನ್ಯಾಯಾಲಯದ ಆವರಣದಲ್ಲಿರುವ ಬೈಕನ್ನು ನೋಡಿಕೊಂಡು ಬರಲು ಸಾಕ್ಷಿಗೆ ಕಳಿಸಲಾಯಿತು. ಸಾಕ್ಷಿ ಬೈಕು ನೋಡಿಕೊಂಡು ಬಂದ ನಂತರ ಪುನಃ ಪ್ರಮಾಣ ಮಾಡಿಸಲಾಯಿತು.) ನಾನು ನೋಡಿ ಬಂದ ಮುಮಾ-1 ಆ ದಿನ ನಾನು ಘಟನೆ ಕಾಲಕ್ಕೆ ನೋಡಿದ ಬೈಕು ಇರುತ್ತದೆ. ಈಗ ತೋರಿಸಿದ ಮುಮಾ-2 ನನ್ನ ಮೊಬೈಲ್ ಇರುತ್ತದೆ. ಮುಮಾ-3 ನ್ನು ಆ ದಿನ 1 ನೇ ಆರೋಪಿ ಧರಿಸಿದ್ದ. ಮುಮಾ-4 ಮತ್ತು 5 ಆ ದಿನ ನಮಗೆ ಹೊಡೆಯಲು ಉಪಯೋಗಿಸಿದ ಚಾಕು ಮತ್ತು ರಾಡು ಇರುತ್ತವೆ ಹಾಗೂ ಮುಮಾ-7 ಚಾಸಾ-1 ಓಪ್ಪೋ ಮೊಬೈಲ್ ಇರುತ್ತದೆ.

**ಪಾಟೀ ಸವಾಲುಃ 3 ನೇ ಆರೋಪಿ ಪರಃ ಶ್ರೀ ಡಿ.ಟಿ.ಬಿ. ವಕೀಲರಿಂದಃ-**

6. ಘಟನೆ ನಡೆದ ಮರುದಿನ ಸಂಜೆ 6.30/7.00 ಘಂಟೆಗೆ ಈ ಮೇಲೆ ಹೇಳಿದ ವಿಷಯದ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿದ್ದರು. ನಾನು ಚಾಸಾ-7 ರ ಮಾಲೀಕತ್ವದಲ್ಲಿರುವ ಚಾಸಾ-1 ಓಡಿಸುತ್ತಿದ್ದ ವಾಹನದ ಕ್ಯಾನ್ ಇಳಿಸುವ ಮತ್ತು ಹಾಕುವ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆಗಳಿಲ್ಲ. ವಾಹನದ ಮಾಲೀಕರು ನನಗೆ ಸಂಬಳ ಕೊಡುತ್ತಿದ್ದರು. ಹಾವೇರಿಯಿಂದ ರಾಣೆಬೆನ್ನೂರು ಕಡೆಗೆ ಹೋಗುವ ಎಲ್ಲ ವಾಹನಗಳು ಘಟನೆ ನಡೆದಿದೆ ಎನ್ನಲಾದ ಹತ್ತಿರದ ಸರ್ವಿಸ್ ರಸ್ತೆ ಮೂಲಕ ರಾಷ್ಟ್ರೀಯ ಹೆದ್ದಾರಿಗೆ ಹೋಗುತ್ತವೆ ಎನ್ನುವುದು ನಿಜ. ಅದೇ ರೀತಿ ಹುಬ್ಬಳ್ಳಿ ಮತ್ತು ಬೆಳಗಾವಿ ಕಡೆಗೆ ಹೋಗುವ ವಾಹನಗಳು ಸಹ ಸದರಿ ರಸ್ತೆಯ ಮೂಲಕ ಬಂದು ರಾಷ್ಟ್ರೀಯ ಹೆದ್ದಾರಿಗೆ ಹೋಗುತ್ತವೆ ಎನ್ನುವುದು ನಿಜ. ಘಟನೆ ಕಾಲಕ್ಕೆ ಸಾಕಷ್ಟು ವಾಹನಗಳು ಓಡಾಡುತ್ತಿದ್ದವು ಎನ್ನುವುದು ಸುಳ್ಳು. ಆ ದಿನ ಯಾವುದೇ ವಾಹನ ಇರಲಿಲ್ಲ.

7. 2024 ರ ಅಗಸ್ಟ್ ಮತ್ತು ಸೆಪ್ಟೆಂಬರನಲ್ಲಿ ಮಳೆ ಸಾಕಷ್ಟಿತ್ತು ಎನ್ನುವುದು ನಿಜ. ಘಟನೆ 10-15 ನಿಮಿಷ ನಡೆಯಿತು. ಚೀರಾಡಿದರೆ ನನಗೆ ಮತ್ತೇನೂ ಮಾಡುತ್ತಾರೋ ಎನ್ನುವ ಭಯವಾಗಿತ್ತು. ಚಾಸಾ-1 ರ ಎಡಪಕ್ಕೆಗೆ ಚಾಕು ಹಾಕಿದ್ದರು. ಚಾಸಾ-1 ರ ತಲೆ ಮತ್ತು ಪಕ್ಕೆಗೆ ರಕ್ತ ಗಾಯವಾಗಿದ್ದವು. ಆ ದಿನ ನನಗೆ ಸಂಬಳವಾಗಿತ್ತು. ಆದುದರಿಂದ ದುಡ್ಡು ಇತ್ತು. ನನ್ನ ಹತ್ತಿರ

ರೂ.500/-ರ 5 ನೋಟುಗಳು ಹಾಗೂ ರೂ.100/-ರ 1 ನೋಟು ಇದ್ದವು. ಚಾಸಾ-1 ರ ಹತ್ತಿರ ಇದ್ದ ದುಡ್ಡಿನ ನೋಟುಗಳ ವಿವರ ಗೊತ್ತಿಲ್ಲ.

8. ನಾನು ಈ ಮೇಲೆ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎನ್ನುವುದು ಸುಳ್ಳು. ಆರೋಪಿತರನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎನ್ನುವುದು ಸುಳ್ಳು. ಗುನ್ನೆ ಜಾಗೆ ಹಾವೇರಿಯಿಂದ 1 ಕಿಮೀ ಅಂತರದಲ್ಲಿದೆ ಎನ್ನುವುದು ನಿಜ. ಸುತ್ತಮುತ್ತಲೂ ಮನೆ, ಅಂಗಡಿ, ಹೋಟೆಲ್ ಇತ್ಯಾದಿ ಇಲ್ಲ ಎನ್ನುವುದು ನಿಜ. ಸಾಕಷ್ಟು ಕತ್ತಲೆ ಇತ್ತು ಎನ್ನುವುದು ನಿಜ. ಕತ್ತಲೆ ಇದ್ದುದರಿಂದ ಬಂದ ವ್ಯಕ್ತಿಗಳನ್ನು ನೋಡಲು ನನ್ನಿಂದ ಹಾಗೂ ಚಾಸಾ-1 ರಿಂದ ಸಾಧ್ಯವಾಗಲಿಲ್ಲ ಎಂದರೆ ನಮ್ಮ ವಾಹನದ ಲೈಟಿನ ಬೆಳಕು ಇತ್ತು.

9. ನಮ್ಮ ವಾಹನದ ಲೈಟಿನ ಬೆಳಕಿನಲ್ಲಿ ಆರೋಪಿತರನ್ನು ಮತ್ತು ಸ್ವತ್ತನ್ನು ನೋಡಿದ್ದೇನೆ ಎಂದು ಪೊಲೀಸರ ಮುಂದೆ ಹೇಳಿಲ್ಲ ಎನ್ನುವುದು ಸುಳ್ಳು. ಘಟನೆಗೆ ಉಪಯೋಗಿಸಿದ ಚಾಕು ಮತ್ತು ರಾಡನ್ನು ಆರೋಪಿತರು ತಮ್ಮೊಂದಿಗೆ ತೆಗೆದುಕೊಂಡು ಹೋದರು. ಆರೋಪಿತರು ತಂದ ಬೈಕ ಮಾಲೀಕರ ವಿವರ ಗೊತ್ತಿಲ್ಲ. ಆರೋಪಿತರ ಸಂಪೂರ್ಣ ಹೆಸರು ಮತ್ತು ವಿಳಾಸ ಗೊತ್ತಿಲ್ಲ. ಆರೋಪಿತರು ನಮ್ಮ ವಾಹನವನ್ನು ಹಿಂದೆ ಹಾಕಿ ಹೋಗಿಲ್ಲ, ವಾಪಾಸು ಬಂದಿಲ್ಲ, ಮುಮಾ-1, 3, 4 ಮತ್ತು 5 ನ್ನು ಉಪಯೋಗಿಸಿಲ್ಲ, ಮುಮಾ-2, 7 ಹಾಗೂ ದುಡ್ಡನ್ನು ಕಸಿದುಕೊಂಡಿಲ್ಲ ಎನ್ನುವುದು ಸುಳ್ಳು.

10. ಪೊಲೀಸರು ನನ್ನನ್ನು ಠಾಣೆಗೆ ಕರೆಸಿಲ್ಲ ಹಾಗೂ ಆರೋಪಿತರನ್ನು ತೋರಿಸಿಲ್ಲ ಎನ್ನುವುದು ಸುಳ್ಳು. ಸಾಕ್ಷಿ ಪುನಃ ಹೇಳುತ್ತಾರೆ ನಾನು ಪೊಲೀಸ ಠಾಣೆಗೆ ಹೋಗಿಲ್ಲ ಮತ್ತು ಆರೋಪಿತರನ್ನು ನೋಡಿಲ್ಲ, ಆದರೆ ಚಾಸಾ-1 ಹೋಗಿದ್ದರು. ಪೊಲೀಸರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರಃ ಶ್ರೀ ಎನ್.ಜಿ.ಎಚ್. ವಕೀಲರಿಂದಃ–**

(ಮೇಲಿನ ಪಾಟೀ ಸವಾಲನ್ನು ಅನುಮೋದಿಸಿರುತ್ತಾರೆ.)

**ಮರು ವಿಚಾರಣೆಃ** ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.